# ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
# KARNATAKA LEGISLATIVE ASSEMBLY RESEARCH AND REFERENCE BRANCH

## ಪತ್ರಿಕಾ ತುಣುಕುಗಳು
## PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಸಂಸತ್ತು

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯ ಕರ್ನಾಟಕ    ದಿನಾಂಕ : DATE : 30/06/2019

### ವಾರದಲ್ಲಿ ಒಂದೂ ಇಂಗ್ಲಿಷ್ ಪದ ಬಳಸದ ಸ್ಪೀಕರ್!

**ಹೊಸದಿಲ್ಲಿ:** ಲೋಕಸಭೆ ನೂತನ ಸ್ಪೀಕರ್ ಓಂ ಬಿರ್ಲಾ ಅವರು ಉತ್ತಮ ಇಂಗ್ಲಿಷ್ ಬಲ್ಲವರಾಗಿದ್ದರೂ ಕಳೆದೊಂದು ವಾರದ ಕಲಾಪದಲ್ಲಿ ಒಂದೇ ಒಂದು ಇಂಗ್ಲಿಷ್ ಪದವನ್ನೂ ಬಳಸದೇ ವಿಶೇಷತೆ ಮೆರೆದಿದ್ದಾರೆ.

ಕಲಾಪದ ಕಾರ್ಯವೈಖರಿಯಲ್ಲಿ ಸಾಕಷ್ಟು ಸುಧಾರಣೆಗಳನ್ನು ತರುವ ನಿಟ್ಟಿನಲ್ಲಿ ಪ್ರಯತ್ನಿಸುತ್ತಿರುವ ಅವರು ತಾವು ಹಿಂದಿ ಭಾಷೆಗೆ ಪ್ರಾಮುಖ್ಯತೆ ಕೊಟ್ಟಿದ್ದರೂ ಸದಸ್ಯರಿಗೆ ಹಿಂದಿಯಲ್ಲಿ ಮಾತನಾಡುವಂತೆ ಎಂದೂ ಸೂಚಿಸಿಲ್ಲ.



'ಹಾನರೆಬಲ್ ಎಂಪಿಸ್' ಪದಕ್ಕೆ 'ಮಾನನೀಯ ಸದಸ್ಯ ಗಣ್', 'ಜೀರೋ ಅವರ್'ಗೆ 'ಶೂನ್ಯ ಕಾಲ್', 'ಅಡ್ಜರ್ನ್‌ಮೆಂಟ್ ಮೋಷನ್'ಗೆ (ನಿಲುವಳಿ ಸೂಚನೆ) 'ಸ್ಥಗನ್ ಪ್ರಸ್ತಾವ್' ಎಂಬ ಹಿಂದಿ ಪದಗಳನ್ನು ಬಳಸುವ ಮೂಲಕ ಹೊಸತನಕ್ಕೆ ಸಾಕ್ಷಿಯಾಗಿದ್ದಾರೆ.

ಸಂಸತ್ತಿನಲ್ಲಿ ವಿಧೇಯಕಗಳನ್ನು ಅಂಗೀಕಾರಕ್ಕೆ ಧ್ವನಿಮತಕ್ಕೆ ಹಾಕಿದ ಸಂದರ್ಭದಲ್ಲಿ ವಿಧೇಯಕ ಪರ ಇದ್ದವರು 'ಯೆಸ್' ಎನ್ನಿ, ವಿರೋಧಿಸುವವರು 'ನೋ' ಎಂದು ಹೇಳುವ ಪದ್ಧತಿಯಲ್ಲೂ ಬಿರ್ಲಾ ಅವರು ಹಿಂದಿ ಪದ ಬಳಸುತ್ತಿದ್ದಾರೆ. 'ಹ್ವಾಕೆ ಪಕ್ಷ್ ಮೇ' (ವಿಧೇಯಕ ಪರ), 'ನಾ ಕೆ ಪಕ್ಷ್ ಮೇ' ( ವಿಧೇಯಕದ ವಿರುದ್ಧ) ಎಂಬ ಪದ ಪ್ರಯೋಗ ಬಳಸಿ ಗಮನ ಸೆಳೆಯುತ್ತಿದ್ದಾರೆ.

**ಶಿಸ್ತಿಗೆ ಒತ್ತು:** ಸದನದಲ್ಲಿ ಶಿಸ್ತಿಗೆ ಒತ್ತುಕೊಟ್ಟಿರುವ ಓಂ ಬಿರ್ಲಾ ಅವರು, ಕೆಲ ದಿನಗಳ ಹಿಂದೆ ಕಲಾಪದಲ್ಲಿ ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧುರಿ ಅವರು ಸ್ನೇಹಿತ ಶಶಿ ತರೂರ್ ಜತೆ ಹರಟೆ ಹೊಡೆಯುತ್ತಿದ್ದ ವೇಳೆ ಹೀಗೆ ಮಾಡಿದಲ್ಲಿ ಕ್ರಮ ಎದುರಿಸಬೇಕಾದೀತು ಎಂದು ಎಚ್ಚರಿಸಿದ್ದರು. ಅಲ್ಲದೇ ಸದನದಲ್ಲಿ ಮಾತನಾಡಲು ಅವಕಾಶ ನೀಡಿದ್ದಕ್ಕಾಗಿ ಸದಸ್ಯರು ಸ್ಪೀಕರ್‌ಗೆ ಧನ್ಯವಾದ ಸಲ್ಲಿಸುವುದು ಬೇಡ ಎಂದು ಅವರು ಸೂಚಿಸಿದ್ದಾರೆ. ''ಸದಸ್ಯರಾದ ನಿಮಗೆ ಮಾತನಾಡಲು ಅವಕಾಶ ದೊರೆತಾಗ ಸಭಾಧ್ಯಕ್ಷರಿಗೆ ಧನ್ಯವಾದ ಸಲ್ಲಿಸುವಲ್ಲಿಯೇ ಹೆಚ್ಚು ಸಮಯ ವಿನಿಯೋಗಿಸದೇ ನೇರವಾಗಿ ವಿಷಯ ಪ್ರಸ್ತಾಪಿಸಿ. ಅಲ್ಲದೇ ಪ್ರಶ್ನೆಗಳನ್ನು ಚುಟುಕಾಗಿ ಕೇಳಿ. ಇದರಿಂದ ಹೆಚ್ಚು ಸದಸ್ಯರಿಗೆ ಅವಕಾಶ ದೊರೆಯುತ್ತದೆ,'' ಎಂದು ಹೇಳಿದ್ದಾರೆ.

6